# ದಿವ್ಯ ಚೈತನ್ಯ

ಮಲೆನಾಡು ತಾಂತ್ರಿಕ ಮಹಾವಿದ್ಯಾಲಯದಲ್ಲಿ ಒಂದು ಚೈತನ್ಯ ತಾಣ. ಅದೇ ದಿವ್ಯ ಚೈತನ್ಯ. ಧ್ಯಾನ ಮತ್ತು ಯೋಗ ಕೇಂದ್ರ. ಆಧ್ಯಾತ್ಮಿಕ ಭಾವ ಸಂಗಮ. ನೆಮ್ಮದಿಯನ್ನು ಅರಸುವ ಮಂದಿಗೆ ಒಂದು ಅಪರೂಪದ ನೆಲೆ. ತ್ರಿಕೋನಾಕಾರದಲ್ಲಿ ನಿರ್ಮಿಸಲಾಗಿರುವ ಧ್ಯಾನ ಕೇಂದ್ರ, ಎದುರಿನಲ್ಲಿ ಒಂದು ಬಿಳಲು ಬಿಟ್ಟಿರುವ ಪ್ರಾಚೀನ ಆಲದ ಮರ. ಮರದ ಕೆಳಗೊಂದು ದಿವ್ಯ ಚೈತನ್ಯವಿರುವ ಪಾದುಕಾ ಮಂದಿರ. ಅಪರೂಪದ ಅನುಭವ. ಅನುಭವಿಸಿಯೇ ಅರಿಯಬೇಕಾದ ವಿಶೇಷತೆ.

ಪ್ರತಿ ತಿಂಗಳ ಮೂರನೇ ಶನಿವಾರ ಅಥವಾ ಭಾನುವಾರ ಒಂದು ಕಾರ್ಯಕ್ರಮ. ಸಾರ್ವಜನಿಕರಿಗಾಗಿ ಸಾಂಸ್ಕೃತಿಕ, ಆಧ್ಯಾತ್ಮಿಕ ಕಾರ್ಯಕ್ರಮ. ಮಕ್ಕಳಿಗಾಗಿ ಭಕ್ತಿಗೀತೆ, ಭಾವ ಗೀತೆ ಕಲಿಕಾ ಶಿಬಿರದ ಜೊತೆಯಲ್ಲಿ ಮಕ್ಕಳ ಮನಗೆಲ್ಲುವ ಉಪನ್ಯಾಸ. ಪ್ರತಿ ತಿಂಗಳ ಬಹುಳ ತ್ರಯೋದಶಿಯಂದು ಸಂಜೆ ಪ್ರದೋಷ ಪೂಜಾ ಕಾರ್ಯಕ್ರಮ. ಪ್ರತಿ ವರ್ಷದ ಗುರು ಪೂರ್ಣಿಮಾ ದಿನದಂದು ಗುರುನಾಥರ ಸ್ಮರಣೆಯಲ್ಲಿ ಸರ್ಕಾರೀ ಶಾಲೆಯಲ್ಲಿ ಓದುತ್ತಿರುವ ೨೫ ಪ್ರೌಢಶಾಲಾ ಬಡ ಮಕ್ಕಳಿಗೆ ವಿದ್ಯಾರ್ಥಿ ವೇತನ ವಿತರಣೆ. ದಿವ್ಯ ಚೈತನ್ಯ ಪ್ರಾರಂಭವಾದ ದಿನದಿಂದ ಇಲ್ಲಿಯವರೆಗೆ ನಡೆಸಲಾಗುವ ಎಲ್ಲಾ ಕಾರ್ಯಕ್ರಮಗಳಿಗೆ ಉತ್ತಮ ಪ್ರೋತ್ಸಾಹ ಸಿಕ್ಕಿದೆ.

**ನೊಂದ** , **ನೆಮ್ಮದಿ**, **ಶಾಂತಿ ಅರಸುವ ಮನಗಳಿಗೆ ದಿವ್ಯ ಚೈತನ್ಯ ಒಂದು ವಿಶ್ರಾಮ ಧಾಮ** .

**ದಿವ್ಯ ಚೈತನ್ಯಕ್ಕೆ ಬನ್ನಿ**, **ನೀವೂ ನಮ್ಮೊಂದಿಗೆ ಕೈಜೋಡಿಸಿ**.

Link to facebook: https://www.facebook.com/groups/151402445229922/